ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿಇ:ಸರಬರಾಜು/ಹಉಪವಿ/ಮಾ-ಜು 2013

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಕ್ರಾಸ್,
ಮಲ್ಲೇಶ್ವರಂ, ಬೆಂಗಳೂರು-12,
ದಿನಾಂಕ:23-09-2013

## ಸುತ್ತೋಲೆ

ವಿಷಯ: ಮಾರ್ಚ್ ಮತ್ತು ಜುಲೈ 2013ರ ದ್ವಿತೀಯ ಪಿಯುಸಿ ಪರೀಕ್ಷೆ ಮುಗಿದ ನಂತರ ಉಪಯೋಗಿಸದ ಉತ್ತರ ಪತ್ರಿಕೆ, ಹೆಚ್ಚುವರಿ ಹಾಳೆ ಮತ್ತು ಪ್ರಾಯೋಗಿಕ ಪರೀಕ್ಷೆಯ ಉತ್ತರ ಪತ್ರಿಕೆಗಳ ಬಂಡಲುಗಳನ್ನು ಇಲಾಖೆಗೆ ಹಿಂತಿರುಗಿಸುವ ಬಗ್ಗೆ.

ಉಲ್ಲೇಖ: (1) ಈ ಕಛೇರಿ ಸಮ ಸಂಖ್ಯೆ ಸುತ್ತೋಲೆ ದಿನಾಂಕ 12-02-2013.
(2) ಈ ಕಛೇರಿ ಜ್ಞಾಪನ ದಿನಾಂಕ 05-03-2013.

2013ರ ದ್ವಿತೀಯ ಪಿಯುಸಿ ಪರಿಕ್ಷಾ ಕೇಂದ್ರಗಳಿಗೆ ಮುಖ್ಯ ಉತ್ತರ ಪತ್ರಿಕೆ, ಹೆಚ್ಚುವರಿ ಹಾಳೆ ಮತ್ತು ಪ್ರಾಯೋಗಿಕ ಪರಿಕ್ಷೆಯ ಉತ್ತರ ಪತ್ರಿಕೆಗಳನ್ನು ಇಲಾಖೆಯಿಂದ ಸರಬರಾಜು ಮಾಡಲಾಗಿದ್ದು ಪರೀಕ್ಷೆ ಮುಗಿದ ಮರುದಿನವೇ ಉಳಿದಿರುವ ಉತ್ತರ ಪತ್ರಿಕೆಗಳನ್ನು ಸಂಬಂದಪಟ್ಟ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ತಪ್ಪದೆ ಕಡ್ಡಾಯವಾಗಿ ಬಂಡಲ್‌ಮಾಡಿ ಕಳುಹಿಸಲು ಉಲ್ಲೇಖ 1ರ ಸುತ್ತೋಲೆಯಲ್ಲಿ ಸೂಚಿಸಲಾಗಿರುತ್ತದೆ. ಆದರೆ ಕೆಲವು ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರುಗಳು ಮೇಲೆ ಸೂಚಿಸಿರುವ ಉತ್ತರ ಪತ್ರಿಕೆ ಬಂಡಲುಗಳನ್ನು ಜಿಲ್ಲಾ ಉಪನಿರ್ದೇಶಕರುಗಳ ಕಛೇರಿಗೆ ಕಳುಹಿಸದೆ, ದುರುಪಯೋಗವಾಗುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಇದನ್ನು ಮಾನ್ಯ ನಿರ್ದೇಶಕರು ಗಂಭೀರವಾಗಿ ಪರಿಗಣಿಸಿರುತ್ತಾರೆ.

ಅದ್ದರಿಂದ 2013ರ ಮಾರ್ಚ್/ಜುಲೈ ಪರಿಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಂದ ಸದರಿ ಬಂಡಲ್‌ಗಳನ್ನು ಜಿಲ್ಲಾ ಉಪನಿರ್ದೇಶಕರು ಕೂಡಲೆ ಪಡೆದುಕೊಳ್ಳಲು ತಿಳಿಸಿದೆ. ಯಾವುದೇ ಕಾರಣಕ್ಕೂ ಪರೀಕ್ಷಾ ಕೇಂದ್ರಗಳಲ್ಲಿ 2013 ಮತ್ತು ಹಿಂದಿನ ಪರೀಕ್ಷೆಗಳ ಉತ್ತರಪತ್ರಿಕೆ, ಹೆಚ್ಚುವರಿ ಹಾಳೆ ಹಾಗೂ ಪ್ರಾಕ್ಟಿಕಲ್ ಪರೀಕ್ಷೆ ಉತ್ತರ ಪತ್ರಿಕೆಗಳು ಉಳಿದುಕೊಂಡಿರದಂತೆ ತರಿಸಿಕೊಂಡು ಎಲ್ಲಾ ಪರೀಕ್ಷಾ ಕೇಂದ್ರಗಳಿಂದ ಬಂದಿರುವ ಬಗ್ಗೆ ಖಾತರಿಪಡಿಸಿಕೊಂಡು ಜಿಲ್ಲಾ ಉಪ ನಿರ್ದೇಶಕರ ಕಛೇರಿಯಲ್ಲಿ ಈ ಕೆಳಗೆ ನಮೂದಿಸಿರುವಂತೆ ಪಟ್ಟಿ ತಯಾರಿಸಿಟ್ಟುಕೊಳ್ಳಲು ತಿಳಿಸಿದೆ. ಸದರಿ ಪಟ್ಟಿಯಂತೆ ಬಂಡಲುಗಳನ್ನು (ಪ್ರಥಮ ಪಿಯುಸಿ ಓಎಂಆರ್ ಅರ್ಜಿಗಳನ್ನು ಇಲಾಖೆಯಿಂದ ವಿತರಿಸುವ ಸಂಧರ್ಬದಲ್ಲಿ) ವಿಆರ್‌ಎಲ್ ಟ್ರಕ್ ಮೂಲಕ ಪಡೆದುಕೊಳ್ಳಲು ಇಲಾಖಾ ಸಿಬ್ಬಂದಿಯವರನ್ನು ನಿಯೋಜಿಸಲಾಗುವುದು. ಈ ಬಗ್ಗೆ ಜಿಲ್ಲಾ ಉಪನಿರ್ದೇಶಕರು ವಿಶೇಷ ಕಾಳಜಿ ವಹಿಸಿ ಕ್ರಮ ತೆಗೆದುಕೊಳ್ಳಲು ತಿಳಿಸಿದೆ.

ಮೇಲೆ ತಿಳಿಸಿರುವ ಉತ್ತರ ಪತ್ರಿಕೆ, ಹೆಚ್ಚುವರಿ ಹಾಳೆಗಳನ್ನು ಒಂದು ವೇಳೆ ಪರೀಕ್ಷಾ ಕೇಂದ್ರಗಳಲ್ಲೇ ಉಳಿಸಿಕೊಂಡಿದ್ದರೆ ಅದಕ್ಕೆ ಮುಖ್ಯ ಅಧೀಕ್ಷಕರು ಹಾಗೂ ಉಪನಿರ್ದೇಶಕರನ್ನೆ ಮುಂದಿನ ಹಾಗುಹೊಗುಗಳಿಗೆ ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ.

| ಅವದಿ | ಪರೀಕ್ಷಾ ಕೇಂದ್ರ ಸಂಖ್ಯೆ | ಹಿಂದಿರುಗಿಸಿರುವ | | | ಒಟ್ಟು ಬಂಡಲುಗಳು |
|---|---|---|---|---|---|
| | | ಮುಖ್ಯ ಉತ್ತರ ಪತ್ರಿಕೆಗಳು | ಹೆಚ್ಚುವರಿ ಉತ್ತರ ಪತ್ರಿಕೆಗಳು | ಪ್ರಾಕ್ಟಿಕಲ್ ಪರೀಕ್ಷೆಯ ಉತ್ತರ ಪತ್ರಿಕೆಗಳು | |
| 1 | 2 | 3 | 4 | 5 | 6 |
| ಮಾರ್ಚ್ 2013 | | | | | |
| ಜುಲೈ 2013 | | | | | |

ಜಂಟಿ ನಿರ್ದೇಶಕರು (ಪರೀಕ್ಷೆ),
ಪದವಿ ಪೂರ್ವ ಶಿಕ್ಷಣ ಇಲಾಖೆ.

ಜಿಲ್ಲಾ ಉಪನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ,
_________________ ಜಿಲ್ಲೆ.